# ಏನಿದು ಹಂಟಿಂಗ್ಟನ್ ಕಾಯಿಲೆ?

**ಹಂಟಿಂಗ್ಟನ್ ಎನ್ನುವುದು ನರಸಂಬಂಧಿ ವ್ಯಾಧಿಯಾಗಿದ್ದು, ಡಿಮೆನ್ಶಿಯಾ, ಪಾರ್ಕಿನ್ಸನ್ ಹಾಗೂ ಡಿಪ್ರೆಷನ್‌ಗಳ ಒಟ್ಟು ಸ್ವರೂಪವೇ ಈ ವಿಚಿತ್ರ ಕಾಯಿಲೆ.**


**■ ಉಮಾ ವೇಣೂರು**

ಬೆಂಗಳೂರಿನ ಮೆಕ್ಯಾನಿಕ್ ಒಬ್ಬನಿಗೆ ವಿಚಿತ್ರ ರೋಗ. ದೈಹಿಕವಾಗಿ ಸದೃಢನಂತೆ ಕಂಡರೂ ಮಾನಸಿಕ ಯಾತನೆ ಆತನನ್ನು ಕಾಡುತ್ತಿತ್ತು. ಖಿನ್ನತೆ, ಮಾನಸಿಕ ಒತ್ತಡದಿಂದ ಬಳಲಿದಂತೆ ಕಂಡ ಅವನನ್ನು ಪರೀಕ್ಷೆಗೊಳಪಡಿಸಿದಾಗ ಆತನಿಗೆ 'ಹಂಟಿಂಗ್ಟನ್' ಎಂಬ ವಿಚಿತ್ರ ಕಾಯಿಲೆ ಇರುವುದು ಪತ್ತೆಯಾಯಿತು.

ಹಂಟಿಂಗ್ಟನ್ ಡಿಸೀಸ್ ವಿರಳ ಕಾಯಿಲೆಗಳ ಸಾಲಿಗೆ ಸೇರುವ ಕಾಯಿಲೆ. ಇದೊಂದು ನರಸಂಬಂಧಿ ವ್ಯಾಧಿಯಾಗಿದ್ದು ಮೆದುಳಿನ ನರಗಳಲ್ಲಿ ಉಂಟಾಗುವ ದೌರ್ಬಲ್ಯಗಳಿಂದ ಬರುವ ಬಹಳ ಅಪರೂಪದ ರೋಗ. ಅಲ್ಲದೆ ಪಾರ್ಕಿನ್ಸನ್, ಡಿಮೆನ್ಶಿಯಾ, ಖಿನ್ನತೆ ಎಲ್ಲವೂ ಒಟ್ಟಾಗಿ ಸೇರಿದಾಗ ಈ ಕಾಯಿಲೆ ಬರುತ್ತದೆ.

### ಹಂಟಿಂಗ್ಟನ್ ಕಾಯಿಲೆ ಲಕ್ಷಣಗಳೇನು?

'ಇದೊಂದು ಆನುವಂಶೀಯ ಕಾಯಿಲೆಯಾಗಿದ್ದು, ಮೆದುಳಿನಲ್ಲಿರುವ ಜೀವಕೋಶಗಳು ನಿಧಾನವಾಗಿ ನಾಶವಾಗುತ್ತಾ ಹೋಗುವುದರಿಂದ ರೋಗಿಯಲ್ಲಿ ಚಲನಶೀಲತೆಗೆ ತೊಂದರೆಯಾಗಬಹುದು. ದೈಹಿಕ ಸಮಸ್ಯೆ ಜೊತೆಗೆ ಮಾನಸಿಕವಾಗಿಯೂ ವ್ಯಕ್ತಿ ಕುಗ್ಗಬಹುದು. ಯೋಚನಾಶಕ್ತಿ, ನೆನಪಿನ ಶಕ್ತಿಗೂ ತೊಂದರೆ ಉಂಟಾಗಬಹುದು. ಖಿನ್ನತೆ, ಕೀಳರಿಮೆ ಮುಂತಾದ ಮಾನಸಿಕ ಸಮಸ್ಯೆ ಜೊತೆಗೆ ದೈಹಿಕ ಸಾಮರ್ಥ್ಯವೂ ಕುಂದಬಹುದು' ಎಂದು ವಿವರ ನೀಡುತ್ತಾರೆ ಬೆಂಗಳೂರಿನ ವಿಕ್ರಂ ಆಸ್ಪತ್ರೆಯಲ್ಲಿ ನರರೋಗ ತಜ್ಞರಾಗಿರುವ ಡಾ. ಪ್ರಶಾಂತ್ ಎಲ್.ಕೆ.



'ದೈಹಿಕ ಸಮಸ್ಯೆಗಳಲ್ಲಿ ಮುಖ್ಯವಾಗಿ ನಡೆದಾಡಲು ಕಷ್ಟವಾಗಬಹುದು, ಅಂಗಾಂಗಗಳ ಚಲನೆಯಲ್ಲಿ ತೊಂದರೆ, ಕುಳಿತು, ನಿಂತು, ಓಡಾಡಿಕೊಂಡು ಮಾಡುವ ಕೆಲಸಕ್ಕೂ ಧಕ್ಕೆಯಾಗಬಹುದು, ಕಣ್ಣುಗಳ ಚಲನೆಯಲ್ಲೂ ತೊಂದರೆ, ದೈಹಿಕ ನಿಯಂತ್ರಣ ಹಾಗೂ ಕ್ಷಮತೆಗೆ ಅಸಮರ್ಥವಾಗಬಹುದು' ಎಂದು ರೋಗದ ಲಕ್ಷಣಗಳನ್ನು ಮತ್ತಷ್ಟು ಸ್ಥೂಲವಾಗಿ ವಿವರಿಸುತ್ತಾರೆ ಈ ತಜ್ಞರು.

'ಹಂಟಿಂಗ್ಟನ್ ಎಂಬುದು ನರಸಂಬಂಧಿ ಕಾಯಿಲೆಯಾದರೂ ಮುಖ್ಯವಾಗಿ ಪಾರ್ಕಿನ್ಸನ್, ಡಿಮೆನ್ಶಿಯಾ ಹಾಗೂ ಖಿನ್ನತೆ.. ಈ ಮೂರೂ ಲಕ್ಷಣಗಳು ಕೂಡಿ ಬರುವ ಅಪರೂಪದ ಕಾಯಿಲೆಯಿದು. ಇದರೊಂದಿಗೆ ಕೆಲವೊಂದು ದೈಹಿಕ ನ್ಯೂನತೆಗಳೂ ಸೇರಿ ಈ ಕಾಯಿಲೆ ಜನರನ್ನು ಬಾಧಿಸುತ್ತದೆ' ಎನ್ನುತ್ತಾರೆ ವಿಕ್ರಂ ಆಸ್ಪತ್ರೆಯಲ್ಲಿ ನ್ಯೂರೋ ಸೈಕ್ರಿಯಾಟ್ರಿ ಕನ್ಸಲ್ಟೆಂಟ್ ಆಗಿರುವ ಡಾ. ಆನಂದ್ ನಾರಾಯಣ್.

'ಮೊದಲೆಲ್ಲ ಪಾಶ್ಚಾತ್ಯರಲ್ಲಿ ಅದರಲ್ಲೂ ಯೂರೋಪ್, ದಕ್ಷಿಣ ಆಫ್ರಿಕಾಗಳಲ್ಲಿ ಈ ರೋಗ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿತ್ತು. ಈ ರೋಗ ಭಾರತಕ್ಕೂ ಕಾಲಿಟ್ಟಿದ್ದು ಬೆಂಗಳೂರಿನಲ್ಲಿ ಸುಮಾರು 300 ಕುಟುಂಬಗಳು ಈ ರೋಗದಿಂದ ಬಳಲುತ್ತಿವೆ. ತಿಂಗಳಿಗೆ ಇಬ್ಬರು ರೋಗಿಗಳು ವಿಕ್ರಂ ಆಸ್ಪತ್ರೆಗೆ ಬರುತ್ತಿದ್ದು, ಈ ಕಾಯಿಲೆ ಹೆಚ್ಚಾಗುವ ಮುನ್ನವೇ ಚಿಕಿತ್ಸೆ ಪಡೆಯುವುದು ಒಳಿತು ಎನ್ನುವ ಅವರು ವಿಕ್ರಮ್ ಆಸ್ಪತ್ರೆಯಲ್ಲಿ ಪ್ರತಿತಿಂಗಳ ಕೊನೆಯ ಬುಧವಾರ ಹಂಟಿಂಗ್ಟನ್ ಕಾಯಿಲೆಗೆ ಚಿಕಿತ್ಸೆ ಲಭ್ಯ' ಎನ್ನುತ್ತಾರೆ. ■

## ಸುದೀರ್ಘ ಇತಿಹಾಸ

ಹಂಟಿಂಗ್ಟನ್ ಕಾಯಿಲೆ ಇಂದು ನಿನ್ನೆಯದಲ್ಲ. ಇದಕ್ಕೆ ಸುದೀರ್ಘವಾದ ಇತಿಹಾಸವೂ ಇದೆ. ಸರಿಸುಮಾರು 70ರ ದಶಕದಲ್ಲಿ ದಕ್ಷಿಣ ಅಮೆರಿಕಾದ ವೆನೆಜುವೆಲಾ ದೇಶದ ಮರಕೈಬೊ ಎಂಬ ಸರೋವರದ ಸುತ್ತಮುತ್ತಲಿನ ಪ್ರದೇಶದ ಜನರಲ್ಲಿ ಈ ಅಪರೂಪದ ಕಾಯಿಲೆ ಮೊದಲು ಪತ್ತೆಯಾಯಿತು. 1968ರಲ್ಲಿ ಅಮೆರಿಕದ ನ್ಯಾನ್ಸಿ ವೆಕ್ಸ್‌ಲರ್ ಎಂಬ ಮನೋಶಾಸ್ತ್ರಜ್ಞೆ (ಕ್ಲಿನಿಕಲ್ ಸೈಕಾಲಜಿಸ್ಟ್) ಅವರ ತಾಯಿಯೂ ಇದೇ ಕಾಯಿಲೆಯಿಂದ ಬಳಲುತ್ತಿದ್ದರು. ಅವರಿಗೆ ಪಾರ್ಕಿನ್ಸನ್ ಹಾಗೂ ಹಂಟಿಂಗ್ಟನ್ ಕಾಯಿಲೆಯ ಲಕ್ಷಣಗಳೂ ಗೋಚರಿಸಿದ್ದವು. ಇದು ವಂಶವಾಹಿನಿಯಿಂದ ಬರುವ ರೋಗ ಎಂದು ಗೊತ್ತಾದ ಕೂಡಲೇ ನ್ಯಾನ್ಸಿ ತಮ್ಮ ಕುಟುಂಬದ ಸದಸ್ಯರೆಲ್ಲರ ಜೀನ್ ಅನ್ನು ಪರೀಕ್ಷೆಗೆ ಒಳಪಡಿಸಿದ್ದರು. ಇದಕ್ಕಾಗಿ ಒಂದು ಚಾರ್ಟ್ ಅನ್ನೂ ಸಿದ್ಧಪಡಿಸಿದರು.

ಈ ಕಾಯಿಲೆ ಎರಡು ವರ್ಷದ ಮಗುವಿನಿಂದ ಹಿಡಿದು ಇಳಿವಯಸ್ಸಿನವರವರೆಗೆ ಯಾರಲ್ಲಿಯೂ ಬರಬಹುದು ಎಂಬುದನ್ನು ಪತ್ತೆ ಹಚ್ಚಿದರು. ಅಲ್ಲದೆ ವ್ಯಕ್ತಿಯ ಕ್ರೋಮೊಸೋಮ್ಸ್‌ಗಳಿಂದಲೇ ಹಂಟಿಂಗ್ಟನ್ ಕಾಯಿಲೆ ಪತ್ತೆ ಹಚ್ಚಲು ಸಾಧ್ಯ ಎಂಬುದನ್ನೂ ಕಂಡುಹಿಡಿದರು. ಅಮೆರಿಕದ ಖ್ಯಾತ ಜಾನಪದ ಹಾಡುಗಾರ ವುಡಿ ಮಾರಜೋರಿ ಗುತ್ರಿ ಹಂಟಿಂಗ್ಟನ್ ಕಾಯಿಲೆಯಿಂದಲೇ ಅಸು ನೀಗಿದ ಎನ್ನುತ್ತದೆ ಇತಿಹಾಸ.